ಅಂತ್ಯಸಮಯವು ಸಂಭವಿಸುವಾಗ ಜೀವಂತವಿರುವವರು ಮತ್ತು ಸಮಾಧಿಗಳನ್ನು ಆರಾಧನಾಲಯಗಳನ್ನಾಗಿ ಮಾಡಿಕೊಳ್ಳುವವರು ನಿಶ್ಚಯವಾಗಿಯೂ ಜನರಲ್ಲೇ ಅತಿ ನಿಕೃಷ್ಟರಾಗಿದ್ದಾರೆ

ಅಬ್ದುಲ್ಲಾ ಬಿನ್ ಮಸ್ಊದ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು
ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ಅಂತ್ಯಸಮಯವು ಸಂಭವಿಸುವಾಗ ಜೀವಂತವಿರುವವರು ಮತ್ತು ಸಮಾಧಿಗಳನ್ನು ಆರಾಧನಾಲಯಗಳನ್ನಾಗಿ ಮಾಡಿಕೊಳ್ಳುವವರು ನಿಶ್ಚಯವಾಗಿಯೂ ಜನರಲ್ಲೇ ಅತಿ ನಿಕೃಷ್ಟರಾಗಿದ್ದಾರೆ."
[حسن] [رواه أحمد]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ಅತಿನಿಕೃಷ್ಟ ಜನರ ಬಗ್ಗೆ ತಿಳಿಸುತ್ತಿದ್ದಾರೆ. ಅವರು ಯಾರೆಂದರೆ ಅಂತ್ಯದಿನ ಸಂಭವಿಸುವಾಗ ಜೀವಂತವಿರುವವರು ಮತ್ತು ಸಮಾಧಿಗಳನ್ನು ಆರಾಧನಾಲಯಗಳನ್ನಾಗಿ ಮಾಡಿ ಅವುಗಳ ಬಳಿ ಮತ್ತು ಅವುಗಳಿಗೆ ಮುಖಮಾಡಿ ನಮಾಝ್ ಮಾಡುವವರು.

https://sunnah.global/hadeeth/kn/show/3375